## ನಾಂದಿಪದ

# 'ಲಲಿತ ಮಂಟಪ'ದ ನೆಳಲಿನಲ್ಲಿ


**ಸಮಕಾಲೀನ** ಕನ್ನಡ ಸಾಹಿತ್ಯದ ಅತ್ಯುತ್ತಮ ಕಥೆ-ಕವಿತೆಗಳನ್ನು ನಿರಂತರವಾಗಿ ಆಯ್ದು ಓದುಗರಿಗೆ ಮುಟ್ಟಿಸುವ ಕೆಲಸದಲ್ಲಿ ನಿರತವಾಗಿರುವ 'ಮಯೂರ', ಸಾಹಿತ್ಯದ ಜೊತೆಗೆ ಸಾಂಸ್ಕೃತಿಕವಾಗಿಯೂ ಮುಖ್ಯವೆನ್ನಿಸುವ ಸಂಗತಿಗಳನ್ನು ಸಹೃದಯರಿಗೆ ತಲುಪಿಸುವ ನಿಟ್ಟಿನಲ್ಲಿ ಪ್ರಜ್ಞಾಪೂರ್ವಕವಾಗಿ ಕಾರ್ಯ ನಿರ್ವಹಿಸುತ್ತಿದೆ. ಬದುಕಿನ ಚೆಲುವು ಮತ್ತು ಸಮೃದ್ಧಿಗೆ ಸಾಹಿತ್ಯದ ಆಸ್ವಾದದೊಂದಿಗೆ ವಿವಿಧ ಕಲಾಪ್ರಕಾರಗಳ ಅರಿವೂ ಅಗತ್ಯ. ಈ ಅರಿವನ್ನು ಒಳಗೊಳ್ಳುವ ಉದ್ದೇಶದಲ್ಲಿ, ದೇಶದ ವಿವಿಧ ಕಲಾಪ್ರಕಾರಗಳಲ್ಲಿ ಗಣನೀಯ ಸಾಧನೆ ಮಾಡಿರುವ ಸಾಧಕರನ್ನು ಪರಿಚಯಿಸುವ 'ಲಲಿತ ಮಂಟಪ' ಮಾಲಿಕೆ ಈ ಸಂಚಿಕೆಯಿಂದ ಆರಂಭಗೊಳ್ಳುತ್ತಿದೆ. ಕಲಾವಿದರ ಬದುಕು-ಸಾಧನೆ-ವ್ಯಕ್ತಿತ್ವದ ಪರಿಚಯದೊಂದಿಗೆ, ದೇಶದ ವಿವಿಧಭಾಗಗಳ ಅಸ್ಮಿತೆಯ ರೂಪದಲ್ಲಿರುವ ಕಲಾಪ್ರಕಾರಗಳ ಪ್ರಾಥಮಿಕ ಪರಿಚಯ ಮಾಡಿಕೊಡುವುದು ಈ ಮಾಲಿಕೆಯ ಉದ್ದೇಶ. ಒಡಿಸ್ಸಿ ನೃತ್ಯ ಕಲಾವಿದ ರಾಮ್ಲಿ ಇಬ್ರಾಹಿಂ ಅವರೊಂದಿಗಿನ ಮಾತುಕತೆಯೊಂದಿಗೆ ಈ ಮಾತಿನ ಮಂಟಪ ಆರಂಭಗೊಳ್ಳುತ್ತಿದೆ. ಮಲೇಷ್ಯಾದ ಮುಸ್ಲಿಂ ಕುಟುಂಬದಲ್ಲಿ ಜನಿಸಿದ ರಾಮ್ಲಿ, ಭಾರತೀಯ ಕಲಾಪರಂಪರೆಯೊಂದಿಗೆ ನಡೆಸಿರುವ ಅನುಸಂಧಾನ, ದೇಶ-ಕಾಲಗಳ ಎಲ್ಲೆಯನ್ನು ಮೀರುವ ಕಲೆಯ ಜೀವಶಕ್ತಿಯನ್ನು ಮನಗಾಣಿಸುವಂತಿದೆ.

ಕನ್ನಡ ವಿಮರ್ಶೆಯ ಘನತೆ ಮತ್ತು ಸಾಧ್ಯತೆಗಳನ್ನು ವಿಸ್ತರಿಸಿದ ವಿಮರ್ಶಕ ಜಿ.ಎಚ್. ನಾಯಕರ ಕುರಿತು ಎಚ್.ಎಸ್. ರಾಘವೇಂದ್ರ ರಾವ್ ಅವರು ಬರೆದಿರುವ ಬರಹ, ಅಗಲಿದ ಹಿರಿಯರ ಬದುಕು-ಸಾಧನೆಯ ಗೌರವಪೂರ್ಣ ಅವಲೋಕನವಾಗಿರುವಂತೆಯೇ, ಶ್ರದ್ಧಾಂಜಲಿ ಬರಹದಲ್ಲೂ ಉಳಿಸಿಕೊಳ್ಳಬೇಕಾದ ವಿಮರ್ಶೆಯ ಎಚ್ಚರಕ್ಕೆ ಉದಾಹರಣೆಯಂತಿದೆ. ಈ ಬರಹ, ಜಿ.ಎಚ್. ನಾಯಕರಂಥ ಹಿರಿಯರನ್ನು ನಮ್ಮ ನೆನಪು ಮತ್ತು ಪ್ರಜ್ಞೆಯ ಭಾಗವಾಗಿಸಿಕೊಳ್ಳುವುದು ಹೇಗೆ ಎನ್ನುವುದರ ಮಾದರಿಯೂ ಆಗಿದೆ.

ವಿಚಾರದೊಂದಿಗೆ ಸ್ವಾರಸ್ಯಕರ ಓದಿಗೂ ಅವಕಾಶ ಕಲ್ಪಿಸುವ ಕಥೆ, ಕವಿತೆ, ಪ್ರಬಂಧ ಹಾಗೂ ಅಂಕಣ ಬರಹಗಳು ಈ ಸಂಚಿಕೆಯಲ್ಲಿವೆ. ಮಳೆಗಾಲದ ಮಬ್ಬು ಹಾಗೂ ತಂಪಿನಲ್ಲಿ, ಸಾಹಿತ್ಯಪ್ರೇಮಿಗಳ ಎದೆಯಿಂದ ಎದೆಗೆ ಹಾಯುವ ಕಿರುಹಣತೆಯಾಗಿ ಈ ಸಂಚಿಕೆ ಪರಿಣಮಿಸಬೇಕೆನ್ನುವುದು 'ಮಯೂರ'ದ ಹಂಬಲ.

**ಮಯೂರ ಬಳಗ**

editormy@mayura.co.in



ಕಲೆ: ವೀರೇಶ ರುದ್ರಸ್ವಾಮಿ